ಶ್ರೀ ಕೆ. ಬಿ. ಕೋಳಿವಾಡ.—ಸಬ್-ಡಿಪೋಗಳನ್ನಾದರೂ ಮಾಡಿದರೆ ಪ್ರಯಾಣಿಕರಿಗೆ ಸೌಲಭ್ಯ ಸಿಕ್ಕಂತಾಗುತ್ತದೆ. ಇದನ್ನು ಮಾಡುತ್ತೀರಾ ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ಈಗ ಸಬ್-ಡಿಪೋ ಅಂತ ಯಾವುದೂ ಇಲ್ಲ.

ಶ್ರೀ ಕೆ. ಬಿ. ಕೋಳಿವಾಡ.—ಅನೇಕ ಕಡೆ ಟ್ರಾಫಿಕ್ ಡಿಪೋ ಅಂತ ಇದೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಇದನ್ನು ನಾನು ವಿಚಾರ ಮಾಡುತ್ತೇನೆ.

ಕೊಡಗು ಜಿಲ್ಲೆಯ ಬೆಸ್ರಿ ನೀರು ಸರಬರಾಜು ಯೋಜನೆಯ ಬಗ್ಗೆ

೨೫೭ (೬೬೯) ಶ್ರೀ ಡಿ. ಎ. ಚಿನ್ನಪ್ಪ.—ಈ ಕೆಳಗಿನ ಪ್ರಶ್ನೆಗಳಿಗೆ ಮಾನ್ಯ ನಗರಾಭಿವೃದ್ಧಿ ಸಚಿವರು ದಯವಿಟ್ಟು ಉತ್ತರಿಸುವರೇ:—

ಅ) ಕೊಡಗು ಜಿಲ್ಲೆಯ ಬೇತ್ರಿ ನೀರು ಸರಬರಾಜು ಯೋಜನೆಯು ೧೯೮೨-೮೩ ರಲ್ಲಿ ಮಂಜೂರಾಗಿದ್ದು ಈಗ ಇದು ಯಾವ ಹಂತದಲ್ಲಿದೆ ?

ಆ) ಮೇಲಿನ ಯೋಜನೆಯ ಕಾರ್ಯಗಳನ್ನು ಪೂರ್ಣಗೊಳಿಸುವ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ನಗರಾಭಿವೃದ್ಧಿ ಸಚಿವರು).—

ಅ) ಈ ಯೋಜನೆಗೆ ಮಂಜೂರಾತಿ ದೊರೆತಿಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಡಿ. ಎ. ಚಿನ್ನಪ್ಪ.—ಶ್ರೀಪವಾನ್ ಧರ್ಮಸಿಂಗ್ ಅವರು ಈ ಖಾತೆಯ ಮಂತ್ರಿಗಳಾಗಿದ್ದಾಗ ಈ ಯೋಜನೆಯನ್ನು ತಯಾರು ಮಾಡಿದ್ದರು. ಇದಕ್ಕೆ ಬ್ಲೂಪ್ರಿಂಟ್ ಎಲ್ಲಾ ಆಗಿದೆ. ಇದಕ್ಕೆ ಎಷ್ಟು ವಿಚಾರಗಬಹುದು ಎಂದು ಮಾನ್ಯ ಮಂತ್ರಿಯವರನ್ನು ಕೇಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಈಗಿರತಕ್ಕಂಥ ಜಲಮೂಲವನ್ನು ಆಧಾರವಾಗಿಟ್ಟುಕೊಂಡು, ಕೆರೆ ಏರಿಯಾವನ್ನು ಸಹ ಆಧಾರವಾಗಿಟ್ಟುಕೊಂಡು, ನೀರು ಸರಬರಾಜು ಮಾಡತಕ್ಕಂಥ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದೇವೆ. ಇದರಿಂದ ೯೦ ಲೀಟರ್ ನೀರು ಒದಗಿಸಲಿಕ್ಕೆ ಸಾಧ್ಯವಾಗುತ್ತದೆ. ಈ ವರ್ಷ ಕೆಲವು ತಾಂತ್ರಿಕ ದೋಷ ಇದ್ದುದರಿಂದ ನೀರಿನ ಪ್ರಮಾಣ ಕಡಿಮೆಯಾಗಿ ಕೊಳವೆ ಬಾವಿಗಳನ್ನು ಹಾಕತಕ್ಕಂಥ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಇದು ನಡೆದುಕೊಂಡು ಬಂದಿದೆ. ಮಾನ್ಯ ಸದಸ್ಯರು ಕೇಳಿರತಕ್ಕಂಥಾದ್ದು ಈ ೧೯೮೧-೮೨ರ ಯೋಜನೆ ಏನಿದೆ, ಇದನ್ನು ೧೯೮೨-೮೩ರಲ್ಲಿ ಅಂದಾಜು ಮಾಡಿದ್ದು ಒಟ್ಟು ಹಣ ೨೬೯ ಲಕ್ಷ ರೂಪಾಯಿಗಳು. ಈಗಿನ ಅಂದಾಜು ಪ್ರಕಾರ ೪೫೦ ಲಕ್ಷ ರೂಪಾಯಿಗಳಾಗುತ್ತದೆ. ಈ ಯೋಜನೆಗೆ ತಗಲುವ ಅಧಿಕ ವೆಚ್ಚವನ್ನು ತುಂಬಲು ಪುರಸಭೆ ಶಕ್ತವಾಗಿಲ್ಲ. ಆದರೂ ಈಗಿನ ನೀರು ಪೂರೈಕೆ ಏನಿದೆ, ಆದರಿಂದ ತಲಾ ೯೦ ಲೀಟರ್ ಒದಗಿಸತಕ್ಕಂಥದ್ದಕ್ಕೆ ಅವಕಾಶ ಇದೆ.

ಶ್ರೀ ಡಿ. ಎ. ಚಿನ್ನಪ್ಪ.—ಮಾನ್ಯ ಮಂತ್ರಿಗಳು ಈಗ ನೀರು ಪೂರೈಕೆ ಮಾಡುತ್ತಿದ್ದೇವೆ ಎಂದು ಹೇಳುತ್ತಿದ್ದಾರೆ. ಆದರಲ್ಲಿ ಈಗ ಇರತಕ್ಕಂಥ ನೀರಿನ ಕಟ್ಟೆ ಏನಿದೆ ಅದನ್ನು ಎತ್ತರಿಸುವ ಹಾಗಿಲ್ಲ. ಅವರ ಫೌಂಡೇಶನ್ ಚೆನ್ನಾಗಿ ಇಲ್ಲ. ಈ ಯೋಜನೆಯನ್ನು ಕೈಬಿಡುವ ಬದಲು ಮಾನ್ಯ ಮಂತ್ರಿಗಳು ಇದನ್ನು ಗಮನಿಸಬೇಕು. ಇದು ಮಡಕೇರಿ ಟೌನ್ ಒಂದೇ ಅಲ್ಲ, ವಿರಾಜಪೇಟೆಯಿಂದ ಹಿಡಿದು ಮಡಕೇರಿವರೆಗೆ ಸುಮಾರು ೫೦ ಕಿಲೋಮೀಟರ್ ದೂರ ಇರತಕ್ಕಂಥ ಎಲ್ಲಾ ಊರುಗಳಿಗೂ ಇದರಿಂದ ನೀರು ಸರಬರಾಜು ಆಗುತ್ತದೆ. ಈಗ ಎಲ್ಲಾ ಕಡೆಯೂ ನೀರು ಸರಬರಾಜು ಸಾಕಷ್ಟು ಪ್ರಮಾಣದಲ್ಲಿ ಆಗುತ್ತಾ ಇಲ್ಲ. ಆದ್ದರಿಂದ ಈ ಯೋಜನೆಯನ್ನು ಕೈಬಿಡದೆ ಪುನಃ ತೆಗೆದುಕೊಳ್ಳಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಈ ಯೋಜನೆಗೆ ನಾಲ್ಕುವರೆ ಕೋಟಿ ರೂಪಾಯಿ ಆಗುತ್ತದೆ ಎಂಬುದನ್ನು ಮೊದಲು ಚಿಂತನೆ ಮಾಡಬೇಕು. ಮಡಕೇರಿ ಊರಿಗೆ ನೀರು ಸರಬರಾಜಿಗೆ ತಕ್ಷಣ ಐದು ಆಡಿ ಆಣೆಕಟ್ಟನ್ನು ಎತ್ತರಿಸುವ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಕೆರೆಯಲ್ಲಿ ಸಾಕಷ್ಟು ನೀರು ಇರುತ್ತದೆ. ಸಧ್ಯಕ್ಕೆ ಯಾವ ತೊಂದರೆಯೂ ಇಲ್ಲ.